**ಚಾಸಾ- 1 ಪ್ರಾಸಾ-1**

**3ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**

**ಸಿಸಿ.ನಂ.13252/2017    ಚಾಸಾ- 1 ಪ್ರಾಸಾ-1**

| | |
|---|---|
| **ಸಾಕ್ಷಿದಾಶರರ ಹೆಸರು** | ಎಸ್. ಜಿ. ಹೆಚ್.ಗೌಡ. |
| **ತಂದೆಯ ಹೆಸರು** | ವಿ.ಗಂಗಪ್ಪ, |
| **ವಯಸ್ಸು** | 48 ವರ್ಷ, |
| **ಉದ್ಯೋಗ** | ನಿರ್ದೇಶಕರು, ಇನ್ ಫೋ ಬೆಲ್ ಐಟಿ ಪ್ರೈ.ಲಿ. ಬೆಂಗಳೂರು. |
| **ವಾಸ** | ಯಲಹಂಕ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 22.04.2026. |

**ಕಲಂ.299 ರ ಅಡಿಯಲ್ಲಿ ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನನಗೆ ಈ ಪ್ರಕರಣದ ಆರೋಪಿ ಗೊತ್ತು. ಚಾಸಾ-2 ನನ್ನ ಸ್ನೇಹಿತ. ಚಾಸಾ-3 ರಿಂದ 6 ಗೊತ್ತು. ನಾನು ರಾಜಸ್ತಾನದಿಂದ 2013 ರಲ್ಲಿ ಬೆಂಗಳೂರಿಗೆ ಬಂದಿರುತ್ತೇನೆ. ಅದೇ ರೀತಿ ಬೆಂಗಳೂರಿನಲ್ಲಿ ನಾನು ಅಕ್ರಿಟ್ ಗ್ಲೋಬಸ್ ಟೆಕ್ನಾಲಾಜಿ ಪ್ರೈ.ಲಿ. ಎಂಬ ಕಂಪನಿಯನ್ನು ಪ್ರಾರಂಭ ಮಾಡಿ ಅದರಲ್ಲಿ ನಾನು ನಿರ್ದೇಶಕನಾಗಿದ್ದೆ. ನನಗೆ ಚಾಸಾ-2 ಮತ್ತು ನಾಗರಾಜ್ ಎನ್ನುವವರು ಆರೋಪಿಯನ್ನು ಐಎಎಸ್ ಅಧಿಕಾರಿ ಎಂದು ಪರಿಚಯ ಮಾಡಿಕೊಟ್ಟಿರುತ್ತಾರೆ. ಪರಿಚಯವಾದ ನಂತರ ಸದರಿ ನಾಗರಾಜ್ ರವರು ಆರೋಪಿಯನ್ನು ನನ್ನ ಕಛೇರಿಗೆ ಕರೆದುಕೊಂಡು ಬಂದಿದ್ದರು. ಆಗ ಆರೋಪಿಯು ಸರ್ಕಾರಕ್ಕೆ ಸಂಬಂದಪಟ್ಟ 100ಕೋಟಿಯ ಪ್ರಾಜೆಕ್ಟ್ ಇದೆ ಎಂದು ಹೇಳಿ, ನಾನು ನಿಮಗೆ ರೂರಲ್ ಕಂಪ್ಯೂಟರ್ ಲಿಟಲಾರಿ ಪ್ರೋಗಾಮ್ ಎಂಬ ಸಾಫ್ಟ್ ವೇರ್ ಪ್ರಾಜೆಕ್ಟ್ ನ್ನು ಸರ್ಕಾರದಿಂದ ಕೊಡಿಸುತ್ತೇನೆ ಎಂದು ಹೇಳಿರುತ್ತಾನೆ. ನಾನು ನನ್ನ ಸ್ನೇಹಿತನ ಕಡೆಯಿಂದ ನಿನಗೆ ಭದ್ರತೆಗಾಗಿ ಸ್ವತ್ತನ್ನು ಶ್ಯೂರಿಟಿ ಕೊಡಿಸುತ್ತೇನೆ. ಆದರೆ ನೀನು ನನಗೆ ಕಮೀಷನ್ ಹಣ ಕೊಡಬೇಕು ಎಂದು ಹೇಳಿರುತ್ತಾನೆ. ಆಗ ನಾನು ಕಮೀಷನ್ ಕೊಡಲು ಆಗುವುದಿಲ್ಲ. ಏಕೆಂದರೆ ನನ್ನ ಕಂಪನಿಯು ಪ್ರೈ.ಲಿ. ಕಂಪನಿಯಾಗಿರುತ್ತದೆ ಎಂದು ಹೇಳಿರುತ್ತೇನೆ. ದಿ.18.01.2014 ರಂದು ಮಹಾಲಕ್ಷ್ಮಿ ಲೇಔಟ್ ನಲ್ಲಿರುವ ಆರೋಪಿಯ ಮನೆಗೆ ನಾಗರಾಜು ರವರು ಅವರ ಕಾರಿನಲ್ಲಿ ಕರೆದುಕೊಂಡು

ಹೋಗಿರುತ್ತಾರೆ. ಅಲ್ಲಿ ಆರೋಪಿಯು ಅವರ ಮನೆಯಲ್ಲಿ ಸಾಫ್ಟ್ ವೇರ್ ಪ್ರಾಜೆಕ್ಟ್ ಬಗ್ಗೆ ಮಾತನಾಡಿರುತ್ತಾರೆ. ಆಗ ನಾನು ಇದು ಕಾನೂನು ಬಾಹಿರವಾಗಿದೆ, ಹಾಗಾಗಿ ನಾನು ಈ ಸಾಫ್ಟ್ ವೇರ್ ಪ್ರಾಜೆಕ್ಟ್ ನ್ನು ಮಾಡಲು ಆಗುವುದಿಲ್ಲ ಎಂದು ಹೇಳಿರುತ್ತೇನೆ. ಒಂದು ವೇಳೆ ಇದು ಆಗಲಿಲ್ಲ ಎಂದರೆ ನನ್ನ ಸ್ನೇಹಿತ ಗಿಲ್ಬಾರ್ಟ್ ಕೋರಿಯಾ ರವರು ಯಲಹಂಕದ ಸರ್ವೇನಂ.62 ಜಮೀನನ್ನು ಮಾರಾಟ ಮಾಡಲು ಇಚ್ಚಿಸಿರುತ್ತಾನೆ. ಸದರಿ ಸ್ವತ್ತು 65,650 ಚದರ ಅಡಿ ಇದೆ. ಇದು ಬಿಬಿಎಂಪಿಯಿಂದ ಕನ್ವರ್ಷನ್ ಆಗಿ ಎ ಖಾತೆ ಆಗಿದೆ. ಇದನ್ನು ರೂ.16 ಕೋಟಿಗೆ ಕರಾರು ಮಾಡಿಸಿಕೊಡುತ್ತೇನೆ. ಇದಕ್ಕೆ ರೂ.75ಲಕ್ಷ ಹಣವನ್ನು ಆರೋಪಿ ಕೊಡುವುದಾಗಿ ಹೇಳಿ, ಉಳಿದ ರೂ.25ಲಕ್ಷ ಹಣವನ್ನು ಮಾತ್ರ ನೀನು ಮತ್ತು ನಿನ್ನ ಸ್ನೇಹಿತ ಚಾಸಾ-2 ನಾಗರಾಜು ರವರು ಕೊಡಿ ಎಂದು ತಿಳಿಸಿರುತ್ತಾನೆ. ಆತನ ಮಾತನ್ನು ನಂಬಿ ದಿ.23.01.2014 ರಂದು ನಾನು ರೂ.10ಲಕ್ಷ ಮತ್ತು ಚಾಸಾ-2 ನಾಗರಾಜು ರವರು ರೂ.10ಲಕ್ಷ ಹಣವನ್ನು ಆರೋಪಿಯ ಮನೆಯ ಹತ್ತಿರ ಹೋಗಿ ನಾವಿಬ್ಬರು ನಗದು ರೂಪದಲ್ಲಿ ಆರೋಪಿಗೆ ಕೊಟ್ಟಿರುತ್ತೇವೆ. ದಿ.23.01.2014 ರಿಂದ ಆಗಸ್ಟ್ 2014 ರ ಅವಧಿಯಲ್ಲಿ ಆರೋಪಿಗೆ ಚೆಕ್ ಮೂಲಕ ಆರ್.ಟಿ.ಜಿ.ಎಸ್ ಮೂಲಕ ರೂ.5ಲಕ್ಷ ಹಣವನ್ನು ನೀಡಿರುತ್ತೇವೆ. ಪುನಃ ನಾನು ದಿ.24.07.2014 ರಂದು ಆರೋಪಿಗೆ ರೂ.10ಲಕ್ಷ ನಗದು ಹಣವನ್ನು ನೀಡಿರುತ್ತೇನೆ. ನಾನು ಮತ್ತು ಚಾಸಾ-2 ನಾಗರಾಜುರವರು ಸೇರಿ ಆರೋಪಿಗೆ ಒಟ್ಟು ರೂ.35ಲಕ್ಷ ಹಣವನ್ನು ನೀಡಿರುತ್ತೇವೆ. ಆದರೆ ಆರೋಪಿಯು ಯಾವುದೇ ಜಮೀನನ್ನು ನಮ್ಮ ಹೆಸರಿಗೆ ನೀಡಲಿಲ್ಲ ಮತ್ತು ಹಣವನ್ನು ಸಹ ವಾಪಸ್ ನೀಡಿರುವುದಿಲ್ಲ. ಆರೋಪಿಯು ನನ್ನನ್ನು ನಂಬಿಸಿ ಮೋಸ ಮಾಡಿರುತ್ತಾನೆ. ನಾನು ದಿ.13.01.2014 ರಂದು ಆರೋಪಿಯ ಮನೆಯ ಹತ್ತಿರ ಹೋಗಿ ನೋಡಿದಾಗ ಆತನು ಮನೆಯಲ್ಲಿ ಇರಲಿಲ್ಲ. ಆತನು ಮನೆಯನ್ನು ಮಾರಾಟ ಮಾಡಿಕೊಂಡು ಓಡಿ ಹೋಗಿರುತ್ತಾನೆ. ಆಗ ನನಗೆ ಗೊತ್ತಾಯಿತು ಈತ ಒಬ್ಬ ಮೋಸ ಮಾಡುವ ವ್ಯಕ್ತಿ ಎಂದು ಗೊತ್ತಾಯಿತು. ನಂತರ ಅದೇ ದಿನ ನಾನು ರಾಜಾಜಿನಗರ ಪೊಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲು ಮಾಡಿರುತ್ತೇನೆ.

2. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಪೊಲೀಸರು

**ಚಾಸಾ- 1 ಪ್ರಾಸಾ-1**

ದಿ.19.01.2015 ರಂದು ಕೃತ್ಯ ನಡೆದ ಸ್ಥಳಕ್ಕೆ ಬಂದು ಬೆಳಿಗ್ಗೆ 09.00 ರಿಂದ 10.00 ಗಂಟೆಯಲ್ಲಿ ಮಹಜರ್ ಕ್ರಮ ಜರುಗಿಸಿರುತ್ತಾರೆ. ಆ ಸಂದರ್ಭದಲ್ಲಿ ಚಾಸಾ-6 ಮತ್ತು 7 ರವರು ಹಾಜರಿದ್ದು, ಅವರು ಸಹ ಮಹಜರ್ ಗೆ ಸಹಿಗಳನ್ನು ಮಾಡಿರುತ್ತಾರೆ. ಸಾಕ್ಷಿಯು ಸದರಿ ಮಹಜರ್ ನಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಈ ಸಂಬಂಧ ನಾನು ದಿ.19.07.2016 ರಂದು ಪೊಲೀಸರಿಗೆ ನನ್ನ ಮರುಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ಯಾಸ್ ಬ್ಯಾಂಕಿನ ನೋಟರೈಸ್ಡ್ ಸ್ಟೇಟ್ ಮೆಂಟ್ ನ್ನು ಹಾಜರುಪಡಿಸಿದ್ದು ಅದನ್ನು ನಿಪಿ.3 ಎಂದು ಗುರುತಿಸಲಾಯಿತು.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**

**CW-1 is present and he is examined as PW-1 and documents are marked as Ex.P.1, 1(a), 2, 2(a) and 3.**
**I.O. is present and he is examined as PW-2 and documents are marked as Ex.P.1(b), 2(b), 4, 4(a) and 3.**
Reissue summons to H.C. who published the proclamation. Call on 12.06.2026.

III Addl.C.J.M, Bengaluru.